73	ಹೂ ಹಾಕುವ ಕಲ್ಲು	ಕಣಿಯೂರು	ಕಣಿಯೂರು
74	ಹಳ್ಳಂಗೇರಿ	ಕೊಕ್ಕಡ	ಕೊಕ್ಕಡ
75	ಎರ್ಮಾಳ್	ಇಂದಬೆಟ್ಟು	ಇಂದಬೆಟ್ಟು
76	ನಾಯಿದ ಗುರಿ	ಅಳದಂಗಡಿ	ಸುಲ್ಲೇರಿ
77	ಶಿಶು ವಿಹಾರ	ಮಡಂತ್ಯಾರು	ಪಾರೆಂಕಿ
78	ಸೂರ್ಯತಾಪ್ಪ	ಪಟ್ರಮೆ	ಪಟ್ರಮೆ
79	ಪುತ್ತಿಗೆ	ಕೊಕ್ಕಡ	ಕೊಕ್ಕಡ
80	ಕಲ್ಲಾರಿ	ಮಚ್ಚಿನ	ಮಚ್ಚಿನ
81	ಇರ್ಮೆತ್ತೋಡಿ	ಶಿರ್ಲಾಲು	ಕರಂಬಾರು
82	ಕುತ್ತಾರು	ನಿಡ್ಲೆ	ಕಳಂಜ್
83	ಸಣ್ಣಾಲು	ಕೊಯ್ಯಾರು	ಕೊಯ್ಯಾರು
84	ಸಬಕಬ್ಬೆಲು	ಮಾಲಾಡಿ	ಸೋಣಂದೂರು
85	ದಾರೊಟ್ಟು	ನಿಟ್ಟಡೆ	ಕುಕ್ಕೇರಿ
86	ಮುಡಿಪಿರೆ	ಮಚ್ಚಿನ	ಮಚ್ಚಿನ
87	ತೆಂಕಾರು ಮಸೀದಿ	ತೆಂಕಾರು	ಬಾರ್ಯಾ
88	ಅಟ್ಲಾಜೆ	ಬಾಳಂಜೆ	ಬಾಳಂಜೆ

410 (503) ಶ್ರೀ ಪ್ರಭಾಕರ ಬಂಗೇರ ಕೆ ಎಂ ಎಲ್ ಎ (ಬೆಳ್ತಂಗಡಿ)

ಮಾನ್ಯ ಗೃಹ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ಗುರುವಾಯನ ಕೆರೆ ಅಗ್ನಿಶಾಮಕ ರಾಣೆ ಕಟ್ಟಡ ನಿರ್ಮಾಣ ಕಾಮಗಾರಿಯು ಇನ್ನೂ ಪೂರ್ಣಗೊಳ್ಳದಿರಲು ಕಾರಣಗಳೇನು ಹಾಗೂ ಅದನ್ನು ಯಾವಾಗ ಪೂರ್ಣಗೊಳಿಸಲಾಗುವುದು,

ಆ) ಅಗ್ನಿಶಾಮಕ ರಾಣೆಯ ಅವಶ್ಯಕತೆಯನ್ನು ಮನಗಂಡು ತ್ವರಿತಗತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಮುಂದಾಗುವುದೇ?

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕು ಗುರುವಾಯನ ಕೆರೆ ಎಂಬಲ್ಲಿ ಅಗ್ನಿಶಾಮಕ ರಾಣೆ ಕಟ್ಟಡದ ನಿರ್ಮಾಣ ಪೂರ್ಣಗೊಂಡಿರುತ್ತದೆ ಆದರೆ ಈ

ರಾಣೆಗೆ ಬೇಕಾದ ಸಂಪರ್ಕ ರಸ್ತೆ ಕಲ್ಪಿಸಲು ದಿನಾಂಕ 12 4 2006ರಂದು ರೂ 4 00 ಲಕ್ಷ ಹಾಗೂ ದಿನಾಂಕ 9 11 2006 ರಂದು ರೂ 1 15 ಲಕ್ಷ ಒಟ್ಟು ರೂ 5 15 ಲಕ್ಷಗಳನ್ನು ಲೋಕೋಪಯೋಗಿ ಇಲಾಖೆಗೆ ಪಾವತಿಸಲಾಗಿದೆ ಈ ಕಾಮಗಾರಿಯು ಪೂರ್ಣಗೊಂಡ ಕೂಡಲೇ ರಾಣೆಯನ್ನು ವಶಕ್ಕೆ ಪಡೆದು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುವುದು

411 (504) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಮಹಿಳಾ ಮತ್ತ ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07 ಮತ್ತು 2008ನೇ ಸಾಲಿಗೆ ಅನ್ವಯವಾಗುವ ಭಾಗ್ಯಲಕ್ಷ್ಮಿ ಯೋಜನೆ ಯನ್ವಯ ಸೌಲಭ್ಯವನ್ನು ಇಲ್ಲಿಯತನಕ ಎಷ್ಟು ಜನ ಫಲಾನುಭವಿಗಳಿಗೆ ನೀಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು),

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತ ಮಕ್ಕಳ ಕಲ್ಯಾಣ ಸಚಿವರು)

ಅ) ದಿನಾಂಕ 17 10 2006ರ ಆದೇಶದಲ್ಲಿ ಸೂಚಿಸಿರುವ ಮಾರ್ಗಸೂಚಿಗಳನ್ವಯ ರಾಜ್ಯದಲ್ಲಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಫಲಾನುಭವಿಗಳನ್ನು ಗುರುತಿಸಲಾಗುತ್ತದೆ 31 3 2006ರ ನಂತರ ಹುಟ್ಟಿದ ಅರ್ಹ ಹೆಣ್ಣುಮಗುವನ್ನು ಹುಟ್ಟಿದ ಒಂದು ವರ್ಷದೊಳಗೆ ಈ ಯೋಜನೆಯಡಿಯಲ್ಲಿ ದಾಖಲಿಸಬಹುದಾಗಿದೆ ದಿನಾಂಕ 31 12 006 ರವರೆಗೆ 1,11,313 ಫಲಾನುಭವಿಗಳನ್ನು ಗುರುತಿಸಲಾಗಿದೆ ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ ಸರ್ಕಾರವು ಈ ಯೋಜನೆಗೆ 2006–07 ಮತ್ತು 2007–08ನೇ ಸಾಲಿಗೆ ಅನ್ವಯಿಸಿ ಅನುಮೋದನೆ ನೀಡಿದೆ

ಈ ಯೋಜನೆ ಸಿಗುವ ಸೌಲಭ್ಯವನ್ನು ದಿನಾಂಕ 17 10 2006ರ ಆದೇಶದಲ್ಲಿ ವಿವರಿಸಿದೆ ಇದರಲ್ಲಿ ಮಗುವಿಗೆ ವೈದ್ಯಕೀಯ ಸೌಲಭ್ಯ ವಿದ್ಯಾಭ್ಯಾಸದ ಸಮಯದಲ್ಲಿ ವಿದ್ಯಾರ್ಥಿವೇತನಗಳು ಸಹ ಒಳಗೊಂಡಿದೆ ಹುಡುಗಿಗೆ 18 ವರ್ಷ ತುಂಬಿದ ನಂತರ ಯೋಜನೆಯ ಮುಕ್ತಾಯದ ಅವಧಿಯಲ್ಲಿ ಕೆಲವೊಂದು ಷರತ್ತುಗಳನ್ನು ಪೂರೈಸಿದ್ದಲ್ಲಿ ಅಂದರೆ ಅವಳು ಒಂದನೇ ತರಗತಿಯಿಂದ ಎಂಟನೇ ತರಗತಿಯವರೆಗೆ ಪಾಸಾಗಿದ್ದಲ್ಲಿ ಮತ್ತು ಅವಿವಾಹಿತಳಾಗಿದ್ದರೆ ಮಾತ್ರ ಅಂತಿಮ ಮೊತ್ತವನ್ನು ನೀಡಲಾಗುವುದು

1/4/06 ರಿಂದ 30/12/2006ರವರೆಗೆ ಹುಟ್ಟಿದ ಹೆಣ್ಣು ಮಕ್ಕಳ ವಿವರ